ದಿಃ15.11.2022 OS.No.192/2015 PW-1

ದಿಃ15.11.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ. ಎ ಬಿ ಕೆ ವಕೀಲರಿಂದಃ

ಪ್ರತಿವಾದಿ ನಮ್ಮ ಊರಿನವೇ ಮತ್ತು ನಮ್ಮ ದೂರದ ಸಂಬಂಧಿ. ನಾನು ಪ್ರತಿವಾದಿ ಸ್ವತ್ತಿನ ಬಾಜುದಾರ ಎಂದರೆ ಸರಿ. ದಾವಾ ಸರ್ವೆ ನಂಬರ್ ಮೂಲ ಸರ್ವೆ ನಂಬರ್ *153* ಎಂದರೆ ಸರಿ. ಒಟ್ಟು ಹದಿನೂರು ಗುಂಟೆ ಎಂದರೆ ಸರಿ. ಮೂಲ ಸರ್ವೆನಂಬರ್ ನಲ್ಲಿ ಒಟ್ಟು ಎಂಟು ಹಿಸ್ಸೆಗಳಾಗಿವೆ ಎಂದರೆ ಸರಿ. ನಾನು ಮಾಲೀಕರಿಂದ ಯಾವ ದಿನಾಂಕದಂದು ಖರೀದಿ ಮಾಡಿದೆ ಎಂದು ನೆನಪಿಲ್ಲ. ಸ್ವತ್ತಿನ ಮೂಲ ಮಾಲೀಕರು ಬಿ ಕೆ ಹುಚ್ಚೇಗೌಡ ಎಂದರೆ ಸರಿ. ದೊಡ್ಡ ಹುಚ್ಚೇಗೌಡ ಅಲಿಯಾಸ್ ದೊಡ್ಡಹುಚ್ಚಪ್ಪ ಎಂದರೆ ನಮ್ಮ ತಂದೆ. ಬೈರೇಗೌಡ ಎಂದರೆ ಪ್ರತಿವಾದಿಯ ತಂದೆ. ದೊಡ್ಡ ಹುಚ್ಚೇಗೌಡ, ಬೈರೇಗೌಡ ಮತ್ತು ಡಿಕೆ ಹುಚ್ಚೇಗೌಡ ಮೂರು ಜನ ಅಣ್ಣ ತಮ್ಮಂದಿರು ಎಂದರೆ ಸರಿ. ಪ್ರತಿವಾದಿ ನಮ್ಮ ದೊಡ್ಡಪ್ಪನ ಮಗ ಎಂದರೆ ಸರಿ. ದಿ.*21.02.1972* ರಲ್ಲಿ ಸರ್ವೆ ನಂಬ್‌ರ್ *153* ರಲ್ಲಿ ಹದಿನೂರು ಗುಂಟೆ ಪೈಕಿ ಪೂರ್ವದ ಕಡೆಗೆ ಐದೂವರೆ ಗುಂಟೆ ಯನ್ನು ಡಿ ಕೆ ಹುಚ್ಚೇಗೌಡರಿಂದ ಪ್ರತಿವಾದಿ ತಂದೆ ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನ ಪೂರ್ವಕ್ಕೆ ಸಿದ್ದಯ್ಯನ ಜಮೀನು ಮತ್ತು ಮಖಾನ ಹದ್ದುಬಸ್ತು, ಪಶ್ಚಿಮಕ್ಕೆ ಡಿಕೆ ಹುಚ್ಚೇಗೌಡರ ಉಳಿಕೆ ಜಮೀನು, ಉತ್ತರಕ್ಕೆ ಗ್ರಾಮಠಾಣಾ, ದಕ್ಷಿಣಕ್ಕೆ ವಿಠಲೇನಹಳ್ಳಿ ಗ್ರಾಮದ ರಸ್ತೆ ಎಂದರೆ ಸರಿ. ಸದರಿ ಐದೂವರೆ ಗುಂಟೆ ಜಮೀನಿನಲ್ಲಿ ಪ್ರತಿವಾದಿ ತಂದೆ ಸ್ವಾದೀನದಲ್ಲಿ ಇದ್ದರು ಎಂದರೆ ಸರಿ. ಪ್ರತಿವಾದಿಯ ತಂದೆ ಸದರಿ ಜಮೀನನ್ನು ಖರೀದಿ ಮಾಡುವ ಸಂದರ್ಭದಲ್ಲಿ ಜಮೀನು ಪೋಡಾಗಿರಲಿಲ್ಲ ಎಂದರೆ ಸಾಕ್ಷಿ ಪೋಡಿಯಾಗಿದ್ದು ಆದರೆ ಸರ್ವೆ ನಂಬರ್ *153* ಎಂದೇ ಕ್ರಯಪತ್ರ ಆಗಿದೆ

ಎಂದು ನುಡಿಯುತ್ತಾರೆ. ನಾನು ಡಿಕೆ ಹುಚ್ಚೇಗೌಡರಿಂದ ದಿ.*26.03.2001* ರಲ್ಲಿ ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ನೀವು ಕ್ರಯಕ್ಕೆ ಪಡೆದುಕೊಳ್ಳುವ ಸಮಯದಲ್ಲಿ ಸರ್ವೆ ಸ್ಕೆಚ್ ಆಗಿದೆಯೇ ಎಂದರೆ ಸಾಕ್ಷಿ ಸರ್ವೆ ಮಾಡಿಸಿ, ಸರ್ವೆ ಮತ್ತು ಸರ್ವೆ ಸ್ಕೆಚ್ ಮಾಡಿಸಿ ಪೋಡಿ ಲೆಕ್ಕಾಚಾರದಲ್ಲಿ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ. ಸದರಿ ಸರ್ವೆ ಸ್ಕೆಚ್ ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಕ್ರಯಕ್ಕೆ ಪಡೆಯುವಾಗ ಮಾಡಿಸಿದ ಸರ್ವೆ ಸ್ಕೆಚ್ ನನ್ನ ಬಳಿ ಇಲ್ಲ ಇತ್ತೀಚೆಗೆ ಮಾಡಿಸಿದ ಸರ್ವೆ ಸ್ಕೆಚ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. *4-5* ವರ್ಷಗಳ ಹಿಂದೆ ಸರ್ವೆ ಸ್ಕೆಚ್ ಅನ್ನು ಮಾಡಿಸಿದ್ದೇನೆ. ಸರ್ವೆ ಸ್ಕೆಚ್ ಅನ್ನು ಮಾಡಿಸುವವರಗೊ ನಿಮ್ಮ ಸ್ವತಿಗೆ ಯಾವುದೇ ಕಲ್ಲುಗಳು ಇರಲಿಲ್ಲ ಎಂದರೆ ಸರಿ. ಡಿಕೆ ಹುಚ್ಚೇಗೌಡರ ಹೆಸರಿನಲ್ಲಿ ಸರ್ವೆ ನಂಬರ್ *153* ರು ಯಾಥಾ ಸ್ಥಿತಿಯಲ್ಲಿಯೇ ಸರ್ವೆ ಸ್ಕೆಚ್ ಆಗುವವರೆಗೂ ಅನುಭವದಲ್ಲಿ ಇದ್ದರು ಎಂದರೆ ಸರಿ. ಡಿಕೆ ಹುಚ್ಚೇಗೌಡರಿಂದ ಕ್ರಯಕ್ಕೆ ಪಡೆದುಕೊಂಡ ವಿಸ್ತೀರ್ಣದಲ್ಲಿಯೇ ಇಲ್ಲಿಯವರೆಗೂ ಎಲ್ಲರೂ ಸ್ವಾದೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ. ಈಗಿನ ವರೆಗೂ ಅನುಭವದ ವಿಸ್ತೀರ್ಣ ಬದಲಾಗಿಲ್ಲ ಎಂದರೆ ಸರಿ. ನೀವು ಮಾಡಿಸಿದಂತಹ ಸರ್ವೆ ಸ್ಕೆಚ್ ನ ವರದಿಯ ಪ್ರಕಾರ ಏನು ಇದೆ ಎಂದರೆ ಸಾಕ್ಷಿ ಪ್ರತಿವಾದಿ ಖಾಲಿ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಇದೆ ಎಂದು ನುಡಿಯುತ್ತಾರೆ. ನಾನು ಕ್ರಯಪತ್ರದ ಪ್ರಕಾರ ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸರ್ವೆ ಸ್ಕೆಚ್ ನ ವರದಿಯ ಪರಕಾರ ನೀವು ಕ್ರಯಪತ್ರದ ಪ್ರಕಾರ ನೀವು ಸ್ವಾದೀನದಲ್ಲಿ ಇಲ್ಲ ಎಂದರೆ ಸಾಕ್ಷಿ ಖಾಲಿ ಜಾಗವನ್ನು ಪ್ರತಿವಾದಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ *153/3* ರ *01.4* ಗುಂಟೆಯಲ್ಲಿ, *153/6* ರಲ್ಲಿ *1.04* ಗುಂಟೆಯಲ್ಲಿ ಪ್ರತಿವಾದಿಗೆ ಸೇರಿದ ಮನೆ ಇದೆ ಎಂದರೆ ಸಾಕ್ಷಿ ಮುಕ್ಕಾಲು ಗುಂಟೆಯಲ್ಲಿ ಪ್ರತಿವಾದಿಗೆ ಸೇರಿದ ಮನೆ ಇದೆ ನನಗೆ

ಸೇರಿದ ಒಂದೂಕಾಲುಗುಂಟೆ ಇದೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿಗೆ ಚೆಕ್ಕುಬಂಧಿ ಪೂರ್ವಕ್ಕೆ ಪ್ರತಿವಾದಿಯ ಜಮೀನು, ಪಶ್ಚಿಮಕ್ಕೆ ನನಗೆ ಸೇರಿದ ಜಮೀನು, ಉತ್ತರಕ್ಕೆ ಪ್ರತಿವಾದಿಯ ಸ್ವತ್ತು, ದಕ್ಷಿಣಕ್ಕೆ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ಎಂದರೆ ಸರಿ. ಸದರಿ ಚೆಕ್ಕು ಬಂಧಿಯಲ್ಲಿ ಆರ್ ಸಿ ಸಿ ಮನೆ ಮತ್ತು ಹಿಂದೆ ನಾಡ ಹೆಂಚಿನ ಮನೆ ಇದೆ ಎಂದರೆ ಸರಿ. ಸದರಿ ಮನೆಯನ್ನು ಪ್ರತಿವಾದಿ *1945* ರಲ್ಲಿ ಪಂಚಾಯ್ತಿಯಲ್ಲಿ ಪರವಾನಿಗೆ ಪಡೆದುಕೊಂಡು ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.